ಶ್ರೀ ಎಸ್. ಆತ್ಮಾನಂದ: ಅಧ್ಯಕ್ಷರೇ, ಈಗ ಪ್ರಾರಂಭ ಆಗಿರತಕ್ಕಂಥ ಕೊಠಡಿಗಳು ಬರತಕ್ಕಂಥ ಆರ್ಥಿಕ ವರ್ಷ ಅಂದರೆ ಮಾರ್ಚಿ 31ರ ಒಳಗೆ ಪೂರ್ತಿಗೊಳ್ಳಬೇಕಾಗುತ್ತದೆ. ಆದರೂ ಕೂಡ ಅನೇಕ ಕೊಠಡಿಗಳು ಇನ್ನೂ ನಿರ್ಮಾಣದ ಹಂತದಲ್ಲಿವೆ. ಅಕಸ್ಮಾತ್ 31-3-94ರ ಒಳಗೆ ಅದು ಪೂರ್ತಿ ಆಗದಿದ್ದರೆ ಅದಕ್ಕೆ ಸರ್ಕಾರ ಏನಾದರೂ ವಿಶೇಷ ಕ್ರಮ ಕೈಗೊಳ್ಳುತ್ತದೆ? ಅದನ್ನು ಯಾವ ರೀತಿಯಲ್ಲಿ ಬಗೆಹರಿಸುತ್ತದೆ. ಎನ್ನತಕ್ಕಂಥದ್ದನ್ನು ಹೇಳಬೇಕು.

3.20 ಪಿ.ಎಂ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಈಗ ಉತ್ತರ ಕೊಟ್ಟಿರುವುದು ತಮಗೆ ಗೊತ್ತಿದೆ. ಇಪ್ಪತ್ತೈದು ಸಾವಿರ ರೂ.ಗಳು ಒಂದು ಕೊಠಡಿಗೆ ನಮ್ಮ ಇಲಾಖೆಯಿಂದ ಬಿಡುಗಡೆ ಮಾಡುತ್ತೇವೆ. ಮತ್ತು ಜಿಲ್ಲಾ ಪರಿಷತ್ತಿಗೂ ಸಹ ಹಣವನ್ನು ಕೊಡುತ್ತಿದೆ. ಮಿಕ್ಕ ಹಣವನ್ನು ವಂತಿಗೆಯಿಂದ ಲೋಕಲ್ ಕಾಂಟ್ರಿಬೂಷನ್ನಿಂದ ತೆಗೆದುಕೊಂಡು ಕೊಠಡಿಯನ್ನು ಪೂರೈಸಬೇಕಾಗುತ್ತದೆ. ಆದರೆ ಕೆಲವಾರು ಕಡೆ ಹೆಚ್ಚು ಕೊಠಡಿಗಳು ಬಂದಿಲ್ಲ. ಇದಕ್ಕೆ ಕಾರಣವೇನೆಂದರೆ ಸ್ವಲ್ಪ ಪಬ್ಲಿಕ್ ಕಾಂಟ್ರಿಬ್ಯೂಷನ್ ಹೆಚ್ಚಿನ ರೀತಿಯಲ್ಲಿ ಬಂದಿರುವುದಿಲ್ಲ. ಅದು ಹೆಚ್ಚಿನ ರೀತಿಯಲ್ಲಿ ಬಂದರೆ ಈ ಕೊಠಡಿಗಳನ್ನು ಪೂರೈಸಲು ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ಮಾನ್ಯ ಶಾಸಕರುಗಳು ಹೆಚ್ಚಿನ ಗಮನವನ್ನು ಕೊಟ್ಟು ಸಹಕಾರ ಮಾಡುತ್ತಾರೆ ಎಂದು ನಂಬಿದ್ದೇನೆ.

ಬಿಜಾಪುರ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ

338 - ಶ್ರೀ ಮನೋಹರ, ಯು. ಏನಾಪುರ (ಬಳ್ಳೊಳ್ಳಿ): ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94ನೇ ಸಾಲಿನಲ್ಲಿ ರಾಜ್ಯದಲ್ಲಿ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ?*

ಆ) *ಅವುಗಳಲ್ಲಿ ಬಿಜಾಪುರ ಜಿಲ್ಲೆಗೆ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು?*

(ತಾಲ್ಲೂಕುವಾರು ಮತ್ತು ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು?

ಇ) *ಜಿಲ್ಲೆಯಲ್ಲೇ ತಾರತಮ್ಯದ ಕಾರಣ ನೀಡುವುದು.*

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಒಟ್ಟು 82 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿದೆ ಹಾಗೂ 8 ಪ್ರಾಥಮಿಕ ಆರೋಗ್ಯ ಘಟಕಗಳನ್ನು, ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲಾಗಿದೆ.

ಆ) ಮೇಲಿನ ಸರ್ಕಾರದ ಆದೇಶದಲ್ಲಿ ಬಿಜಾಪುರ ಜಿಲ್ಲೆಯ ತಾಲ್ಲೂಕು ಮತ್ತು ಮತ ಕ್ಷೇತ್ರಗಳ ಅನುಸಾರ ಮಂಜೂರು ಮಾಡಿದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿವರ ಕೆಳಗಿನಂತಿದೆ.

ಕ್ರಮ ಸಂಖ್ಯೆ	ತಾಲ್ಲೂಕು	ಸ್ಥಳ	ಮತಕ್ಷೇತ್ರ	ಸ್ಥಳ
1.	ಬಿಳಗಿ	ಕುಂದರ್ಗಿ	ಬಿಳಗಿ	ಕುಂದರ್ಗಿ
2.	ಬಿಜಾಪುರ	ಕನಮಡಿ	ಬಿಜಾಪುರ	ಕನಮಡಿ
3.	ಬಿಜಾಪುರ	ಕಾಖಂಡಕಿ	ಬಿಜಾಪುರ	ಕಾಖಂಡಕಿ
4.	ಬಿ. ಬಾಗೇವಾಡಿ	ಯಳವಾರ	ಬಿ. ಬಾಗೇವಾಡಿ	ಯಳವಾರ

5.	ಬಿ. ಬಾಗೇವಾಡಿ	ಸಾಸನೂರು	ಹೂವಿನ ಹಿಪ್ಪರಗಿ	ಸಾಸನೂರು
6.	ಜಮಖಂಡಿ	ಚಿಮ್ಮಡ	ಜಮಖಂಡಿ	ಚಿಮ್ಮಡ.
7.	ಬಿ. ಬಾಗೇವಾಡಿ	ಹೂವಿನ ಹಿಪ್ಪರಗಿ	ಹೂವಿನ ಹಿಪ್ಪರಗಿ	ಹೂವಿನ ಹಿಪ್ಪರಗಿ.
8.	ಸಿಂಧಗಿ	ಮಲಘಾಣ	ಸಿಂಧಗಿ	ಮಲಘಾಣ
9.	ಮುಧೋಳ	ಉತ್ತೂರು	ಮುಧೋಳ	ಉತ್ತೂರು
10.	ಇಂಡಿ	ಬಿ.ಕೆ.ಲೋಣಿ	ಇಂಡಿ	ಬಿ.ಕೆ.ಲೋಣಿ
11.	ಹುನಗುಂದ್	ಹಾವರಗಿ	ಹುನಗುಂದ್	ಹಾವರಗಿ

ಇ) ಅವಶ್ಯಕತೆಗನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿರುವುದರಿಂದ ತಾರತಮ್ಯದ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಮನೋಹರ ಯು. ಐನಾಪುರ : ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ಹನ್ನೊಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ. ಸಚಿವರು, ತಾಲ್ಲೂಕುವಾರು ಮತ್ತು ಕ್ಷೇತ್ರವಾರು ವಿವರಗಳನ್ನು ಕೊಟ್ಟಿದ್ದಾರೆ. ಆದರೆ ಮತಕ್ಷೇತ್ರಗಳ ವಿವರ ಸರಿಯಾಗಿಲ್ಲ ಎಂದು ಅನ್ನಿಸುತ್ತದೆ. ನನ್ನ ಮತಕ್ಷೇತ್ರ ಬಳ್ಳೊಳ್ಳಿ, ತಾಲ್ಲೂಕು ಇಂಡಿ ಅಲ್ಲಿ ಸಚಿವರು ಬಿ.ಕೆ. ಲೋಣಿದಲ್ಲಿ ಮಂಜೂರು ಮಾಡಿದ್ದಾರೆ. ಅದಕ್ಕೆ ಧನ್ಯವಾದಗಳು. ಈ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ.

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) : ಬೇಗ ಪ್ರಾರಂಭ ಮಾಡುತ್ತೇನೆ.

ಶ್ರೀ ಮನೋಹರ ಯು. ಐನಾಪುರ : ನಿರ್ದಿಷ್ಟವಾಗಿ ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ಹೇಳುತ್ತೀರಾ? ಏಕೆಂದರೆ ಬಳ್ಳೊಳ್ಳಿ ಕ್ಷೇತ್ರದಲ್ಲಿ ಸೆಪ್ಟೆಂಬರ್ 30 ರಂದು ಆದ ಭೂಕಂಪದಿಂದ 30-40 ಹಳ್ಳಿಗಳು ನಾಶವಾಗಿವೆ. ಸಾಕಷ್ಟು ತೊಂದರೆ ನಮ್ಮ ಮತಕ್ಷೇತ್ರದವರಿಗೆ ಆಗಿದೆ. ಅದಕ್ಕೋಸ್ಕರ ಸ್ಪೆಷಲ್ ಕನ್ಸಿಡರೇಷನ್ ಕೊಟ್ಟು 1994-95ರಲ್ಲಿ ಮೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳಾದ ಅಂಜೂಟಗಿ, ಬಸವಣಿಕಿ ಮತ್ತು ಲಚ, ಇವುಗಳಿಗೆ ಮಂಜೂರು ಮಾಡಲು ಆರೋಗ್ಯ ಸಚಿವರು ಕ್ರಮ ಕೈಗೊಳುತ್ತಾರೆಯೇ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) : ಮಾನ್ಯ ಸದಸ್ಯರ ವಿನಂತಿಯನ್ನು ಪರಿಶೀಲಿಸಲಾಗುವುದು.

ಶ್ರೀ ಸಿ.ಎಸ್. ನಾಡಗೌಡ : ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಕೊಟ್ಟಿರುವ ಮಾಹಿತಿ ತಪ್ಪಾಗಿದೆ. ಯಾವ ಮತಕ್ಷೇತ್ರಕ್ಕೆ ಸೇರಿದ ಎಂಬುದರಲ್ಲಿ ತಪ್ಪಾಗಿದೆ. ತಮ್ಮ ಸ್ವಂತ ಕ್ಷೇತ್ರವಾದ ಯಳವಾರ, ಬಸವನ ಬಾಗೇವಾಡಿ ಕ್ಷೇತ್ರದಲ್ಲಿ ಬರುತ್ತದೆ ಎಂದು ಮಂತ್ರಿಗಳು ತಿಳಿಸಿದ್ದಾರೆ. ಇಲ್ಲಿ ತಮ್ಮ ಕ್ಷೇತ್ರಕ್ಕೆ ಮೂರು ಪಿ.ಎಚ್.ಸಿ.ಗಳನ್ನು ತೆಗೆದುಕೊಂಡು ಮುದ್ದೇಬಿಹಾಳದ ಪ್ರಪೋಸಲನ್ನು ರಿಜಕ್ಟ್ ಮಾಡಿದ್ದಾರೆ. ಯಾವ ಕಾರಣದಿಂದ ಇದನ್ನು ಮಾಡಿದ್ದಾರೆ ಎಂದು ಕೇಳುತ್ತಿದ್ದೇನೆ? ಅಧಿಕಾರಿಗಳು ಬೇಕಾದದ್ದನ್ನು ಮಾಡಬಹುದು ಎಂಬ ಅರ್ಥ ಇದರಲ್ಲಿ ಬರುತ್ತದೆ. ಇದರ ಬಗ್ಗೆ ಈ ಸದನದಲ್ಲಿ ಈ ವಿವರಗಳನ್ನು ಕೇಳುವ ಹಕ್ಕು ನನಗೆ ಇದೆ.

ಅಧ್ಯಕ್ಷರು : ತಾವು ಈ ವಿಚಾರವನ್ನು ಬೇರೆ ರೂಪದಲ್ಲಿ ಪ್ರಸ್ತಾವನೆ ಮಾಡಿ.

ಶ್ರೀ ಸಿ.ಎಸ್. ನಾಡಗೌಡ : ಇವುಗಳ ಬಗ್ಗೆ ಕೇಳಲು ಸದಸ್ಯರಿಗೆ ಹಕ್ಕಿದೆ.

ಅಧ್ಯಕ್ಷರು : ನಾನು ಆಗಲೇ ಹೇಳಿದ್ದೇನೆ. ತಾವು ಬೇರೆ ರೂಪದಲ್ಲಿ ಪ್ರಸ್ತಾವನೆಯನ್ನು ತೆಗೆದುಕೊಂಡು ಬನ್ನಿ.

ಸಂಪಂಗಿರಾಮನಗರದಲ್ಲಿರುವ ಸರ್ಕಾರಿ ಪ್ರಾಥಮಿಕ ಮಾದರಿಶಾಲೆಯಲ್ಲಿರುವ ಆಳವಾದ ಬಾವಿ

166 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಾಜಿನಗರ ಕ್ಷೇತ್ರದ ಸಂಪಂಗಿರಾಮನಗರ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ಬಳಿ ಒಂದು ದೊಡ್ಡ ಮತ್ತು ಆಳವಾದ ಬಾವಿ (ಕಲ್ಯಾಣಿ)ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕಲ್ಯಾಣಿ ಮಳೆ ನೀರಿನಿಂದ ತುಂಬಿ ನಿಂತಿದ್ದು, ಶಾಲಾ ಮಕ್ಕಳ ಜೀವನಕ್ಕೆ ಹಾನಿಕರವಾಗಿರುವುದು ಮತ್ತು ಒಂದು ಮಗು ಅದರಲ್ಲಿ ಮುಳುಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸದರಿ ಕೋರಿಕೆಯನ್ನು ಅನೇಕ ಸಲ ಸದನದಲ್ಲಿ ಪ್ರಸ್ತಾಪಿಸಿದ್ದರೂ ಸಹ ಬೇಡವಾದ ಈ ಬಾವಿಯನ್ನು ಮುಚ್ಚಿಸದೆ ಸರ್ಕಾರವು ಉದಾಸೀನದಿಂದ ಇರಲು ಕಾರಣವೇನು?

ಈ) ಹೊನೇ ಪಕ್ಷ ಈಗಲಾದರೂ ಸರ್ಕಾರ ತಡಮಾಡದೇ ಕ್ರಮ ಕೈಗೊಳ್ಳುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಹೌದು

ಇ) ಈ ಬಾವಿಯನ್ನು ಮುಚ್ಚಲು 1989ನೇ ವರ್ಷದಲ್ಲಿಯೇ ಕಾರ್ಯಪಾಲಕ ಅಭಿಯಂತರು ವಿವಿದೋದ್ದೇಶ ತಾಂತ್ರಿಕ ವಿಭಾಗ, ಬೆಂಗಳೂರು ಇವರಿಗೆ ಬರೆಯಲಾಗಿದೆ.

ಈ) ಅನುದಾನ ಬಿಡುಗಡೆಯಾದ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರ ಹೊಸದೇನೂ ಅಲ್ಲ, ಹಿಂದೆಯೂ ನಾನು ಇಲ್ಲಿ ನಾಲ್ಕು ವರ್ಷಗಳಿಂದ ಸತತವಾಗಿ ಪ್ರಯತ್ನ ಮಾಡುತ್ತಿದ್ದೇನೆ. ಈ ದೆಸೆಯಲ್ಲಿ ಪ್ರತಿಯೊಬ್ಬ ಅಧ್ಯಕ್ಷರು ಆಶ್ವಾಸನೆ ಕೊಟ್ಟರು. ಪ್ರತಿಯೊಬ್ಬ ಮಂತ್ರಿಗಳೂ ಆಶ್ವಾಸನೆಯನ್ನು ಕೊಟ್ಟರು. ಅದೇ ತರಹ ಉತ್ತರ ಈಗಲೂ ಬಂದಿದೆ. ಅಲ್ಲ ಬಡಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಆ ಬಾವಿ ಬಿದ್ದು ಮಕ್ಕಳು ಸಾಯುವ ಪರಿಸ್ಥಿತಿ ಇದೆ. ಒಂದು ಮಗು ಬಿದರಲ್ಲಿ ಮುಳುಗಿ ಸತ್ತುಹೋಯಿತು. ಇದನ್ನೆಲ್ಲಾ ಹೇಳಿದಮೇಲೂ ಸಹ ಸ್ವಲ್ಪವು ಕರುಣೆ ಇಲ್ಲವೇ? ಅಧಿಕಾರಿಗಳೂ ಕೂಡ ಇದನ್ನು ಗಮನಿಸಿಲ್ಲ. ಆ ಶಾಲೆಗೆ ಸಂಬಂಧಪಟ್ಟ ಹಾಗೆ ಒಂದು ಕಟ್ಟಡ ಇದೆ. ಅದರಲ್ಲಿ ಬಾವಿ ಅಂದರೆ ಕಲ್ಯಾಣಿ ಎಂದು ಏನು ಹೇಳುತ್ತೇವೆ ಅದು ಇದೆ. ಇದು ಬಹಳ ಪುರಾತನಕಾಲದ್ದು. ಅದನ್ನು ಮುಚ್ಚಬೇಕು. ಇಲ್ಲ ಸರಿಪಡಿಸಿ ನೀರು ಹರಿದುಹೋಗುವಂತೆ ಮಾಡಬೇಕು. ಈಗ ಏನು ಉತ್ತರ ಕೊಟ್ಟಿದ್ದೀರೆಂದರೆ ಈ ಬಾವಿಯನ್ನು ಮುಚ್ಚಲು 1989ನೇ ವರ್ಷದಲ್ಲಿಯೇ ಕಾರ್ಯಪಾಲಕ ಅಭಿಯಂತರು, ವಿವಿದೋದ್ದೇಶ ತಾಂತ್ರಿಕ ವಿಭಾಗ, ಬೆಂಗಳೂರು ಇವರಿಗೆ ಬರೆಯಲಾಗಿದೆ ಎಂದು ಉತ್ತರವನ್ನು ಬರೆದುಬಿಟ್ಟರೆ ಆಗಿಹೋಯಿತೇ?

ಅಧ್ಯಕ್ಷರು : ತಮಗೆ ಏನು ಆಗ ಬೇಕು ಎಂಬುದನ್ನು ಹೇಳಿ?